# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯದರ್ಶಿ, ವಾರ್ಡ್ ಸಮಿತಿ /ಸಹಾಯಕ ಇಂಜಿನಿಯರ್‌ರವರ ಕಛೇರಿ, ವೃಷಭಾವತಿನಗರ ವಾರ್ಡ್–102,
3ನೇ ಮುಖ್ಯರಸ್ತೆ, ಬಿ.ಇ.ಎಮ್.ಎಲ್. ಲೇಔಟ್, ಬೆಂಗಳೂರು–79.

ದಿನಾಂಕ: 06/02/2021

ಸಂಖ್ಯೆ: ವಾ–102/ವಾ.ಸ./ಸಭಾನಡವಳಿ–09/2020–21

-:ಸಭೆಯ ನಡವಳಿಗಳು:-

ಮಾನ್ಯ ನೋಡಲ್ ಅಧಿಕಾರಿಯವರ ಆದೇಶದಂತೆ, ದಿನಾಂಕ: 06/02/2021 ಶನಿವಾರದಂದು ಬೆಳಿಗ್ಗೆ 10.00 ಘಂಟೆಗೆ ವಾರ್ಡ್–102 ವೃಷಭಾವತಿನಗರದ ವಾರ್ಡ್ ಮಟ್ಟದ ಸಮಿತಿ ಸಭೆಯನ್ನು ಆಯೋಜಿಸಲಾಯಿತು.

ಶ್ರೀ ಜಿ.ಪ್ರಕಾಶ್ ಸಮಿತಿಯ ಕಾರ್ಯದರ್ಶಿಗಳು ರವರು ಸಭೆಯನ್ನು ನಡೆಸುತ್ತಾ, ಸಾರ್ವಜನಿಕರ ಕುಂದು ಕೊರತೆಗಳು ಹಾಗೂ ವಾರ್ಡ್ ಅಭಿವೃದ್ಧಿಗೆ ಸಂಬಂದಿಸಿದಂತೆ ಹಾಗೂ ಕೋವಿಡ್–19 ವೈರಸ್‌ನ ಸೋಂಕಿನ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು, ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹಾಗೂ ಸಾರ್ವಜನಿಕರ ಹಿತರಕ್ಷಣೆಗಾಗಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಲು ಸಭೆಯಲ್ಲಿ ಉಪಸ್ಥಿತರಾಗಿರುವ ಮಾನ್ಯ ನೋಡಲ್ ಅಧಿಕಾರಿಯವರಿಗೆ ಮತ್ತು ಸಭೆಗೆ ಆಗಮಿಸಿರುವ ಎಲ್ಲಾ ಅಧಿಕಾರಿಗಳಿಗೆ ಸಭೆಗೆ ಸ್ವಾಗತ ಕೋರುತ್ತಾ, ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಮುನ್ನಡೆಸಲಾಯಿತು.

**ಸಭೆಗೆ ಹಾಜರಿದ್ದವರು:**

| ಕ್ರಮ ಸಂಖ್ಯೆ | ಹೆಸರು ಮತ್ತು ಪದನಾಮ |
|---|---|
| 1 | ಶ್ರೀ ಕೆ.ವಿಜಯ್ ಶೇಖರ್, ನೋಡಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು ವಾರ್ಡ್ ಸಮಿತಿ, ವಾರ್ಡ್–102 |
| 2 | ಶ್ರೀ ಜಿ.ಪ್ರಕಾಶ್, ಕಾರ್ಯದರ್ಶಿ ವಾರ್ಡ್ ಸಮಿತಿ ಮತ್ತು ಸಹಾಯಕ ಅಭಿಯಂತರರು, ವಾರ್ಡ್–102. |
| 3 | ಶ್ರೀ ಜಿ.ಆರ್.ಗೋವಿಂದ ರಾಜುಲು, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್–102 |
| 4 | ಶ್ರೀ ಎಸ್.ಬಾಬು, ಕಿರಿಯ ಆರೋಗ್ಯ ಪರಿವೀಕ್ಷಕರು, (ಗುತ್ತಿಗೆ) ವಾರ್ಡ್–102 |
| 5 | ಶ್ರೀ ಹರೀಶ್, ಟ್ಯಾಕ್ಸ್ ಇನ್ಸ್‌ಪೆಕ್ಟರ್, ವಾರ್ಡ್–102 |
| 6 | ಶ್ರೀ ಸಿದ್ದರಾಜು, ಸಹಾಯಕ ಅಭಿಯಂತರರು, ಎನ್–6, ಬೆಸ್ಕಾಂ |
| 7 | ಶ್ರೀ ರಕ್ಷಿತ್ ಆರ್., ಬಿಬಿಎಂಪಿ ಮಾರ್ಷಲ್. |
| 8 | ಶ್ರೀ ಮಹದೇವಯ್ಯ, ಸ್ಯಾನಿಟರಿ ದಫೇದಾರರು |
| 9 | ಶ್ರೀ ರಾಜ್ ಕುಮಾರ್, ಸದಸ್ಯರು, ವಾರ್ಡ್ ಸಮಿತಿ ವಾರ್ಡ್–102 |
| 10 | ಶ್ರೀ ದೇವರಾಜು, ಸದಸ್ಯರು, ವಾರ್ಡ್ ಸಮಿತಿ ವಾರ್ಡ್–102 |
| 11 | ಶ್ರೀಮತಿ ಗೌರಮ್ಮ, ಸದಸ್ಯರು, ವಾರ್ಡ್ ಸಮಿತಿ ವಾರ್ಡ್–102 |
| 12 | ಶ್ರೀಮತಿ ಪ್ರೇಮ, ಸದಸ್ಯರು, ವಾರ್ಡ್ ಸಮಿತಿ ವಾರ್ಡ್–102 |
| 13 | ಶ್ರೀ ಹೇಮಂತ್ ಕುಮಾರ್, ಸದಸ್ಯರು, ವಾರ್ಡ್ ಸಮಿತಿ ವಾರ್ಡ್–102 |

ಮು.ತಿ.ನೋ.

Scanned with CamScanner

## ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:

### 1) ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-

- ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗದ ಪ್ರಸ್ತುತ ಸ್ಥಿತಿ ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಕಳೆದ 15 ದಿನಗಳಲ್ಲಿ ಕೈಗೊಂಡ ಕಾರ್ಯಕ್ರಮಗಳ ಮಾಹಿತಿಗಳ ವಿವರಣೆ ನೀಡಲು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಿದರು.
- ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಗೆ ಸಂಭಂಧಿಸಿದಂತೆ ಒಟ್ಟು 7 ಹೊಸದಾದ ಕೇಸ್‌ಗಳು ಕಂಡುಬಂದಿದ್ದು, ಅದರಲ್ಲಿ, 5 ಜನರು ಗುಣಮುಖರಾಗಿರುತ್ತಾರೆ ಹಾಗೂ ಉಳಿದ ಇಬ್ಬರನ್ನು ಹೋಮ್‌ಐಸೋಲೇಷನ್ ಮಾಡಲಾಗಿರುತ್ತದೆ. ದಿನನಿತ್ಯ 80 ಪರೀಕ್ಷೆಗಳನ್ನು ನಡೆಸಲಾಗುತ್ತಿರುತ್ತದೆ. ಇದುವರೆವಿಗೂ 4 ಸರಣಿಗಳಲ್ಲಿ ವ್ಯಾಕ್ಸಿನೇಷನ್ ಮಾಡಲಾಗಿರುವುದಾಗಿ ಸಭೆಗೆ ತಿಳಿಸಿದರು.
- ಸಭೆಯಲ್ಲಿ ಹಾಜರಿದ್ದ ಬಿಬಿಎಂಪಿ ಮಾರ್ಷಲ್ ರವರು ಮಾತನಾಡುತ್ತಾ, ದಿನನಿತ್ಯ ಮಾಸ್ಕ್ ಧರಿಸದ ಸುಮಾರು 20 ಕೇಸ್‌ಗಳ ವರೆಗೆ ದಂಡ ವಿಧಿಸಲಾಗುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು.

### 2) ಅಭಿಯಂತರರ ವಿಭಾಗದ ಬಗ್ಗೆ:-

- ಶ್ರೀ ಹೇಮಂತ್ ಕುಮಾರ್ (ಸದಸ್ಯರು) ಮಾತನಾಡುತ್ತಾ, ಎನ್.ಜಿ.ಓಸ್'ಕಾಲೋನಿಯ ಮುಖ್ಯರಸ್ತೆ ಮತ್ತು ಅಡ್ಡ ರಸ್ತೆಗಳಲ್ಲಿ ಡೆಬ್ರಿಸ್‌ಗಳನ್ನು ತೆರವುಗೊಳಿಸದೇ ಹಾಗೆ ಬಿಟ್ಟಿರುತ್ತಾರೆಂದು ದೂರಿದರು.
- ಸಹಾಯಕ ಅಭಿಯಂತರರು ಮಾತನಾಡುತ್ತಾ, ಈಗಾಗಲೇ ವಾರ್ಡ್ ವ್ಯಾಪ್ತಿಯಲ್ಲಿ ಹಾಗೂ ಸದರಿ ರಸ್ತೆಗಳಲ್ಲಿ ಡಾಂಬರೀಕರಣ ಕಾಮಗಾರಿಯು ಪ್ರಗತಿಯಲ್ಲಿದ್ದು, ಮುಂದಿನ ದಿನಗಳಲ್ಲಿ ಕಾಮಗಾರಿ ಪೂರ್ಣಗೊಂಡ ನಂತರ ಡೆಬ್ರಿಸ್‌ಗಳನ್ನು ತೆರವುಗೊಳಿಸುವುದಾಗಿ ಸಭೆಗೆ ತಿಳಿಸಿದರು.
- ಶ್ರೀ ದೇವರಾಜ್ (ಸದಸ್ಯರು) ಮಾತನಾಡುತ್ತಾ, 1ನೇ ಮುಖ್ಯರಸ್ತೆ (ಜಗದ್ಗುರು ಶಾಲೆಯ ರಸ್ತೆ) ಯಲ್ಲಿ ಚರಂಡಿ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದ್ದು, ಸುಬ್ಬಯ್ಯ ರವರ ಮನೆಯ ಮುಂದೆ ಚರಂಡಿ ನಿರ್ಮಾಣ ಮಾಡಲು ಆಕ್ಷೇಪಿಸಿರುತ್ತಾರೆ ಎಂದು ಸಭೆಯಲ್ಲಿ ದೂರಿದರು.
- ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಸದರಿ ಸ್ಥಳವನ್ನು ಪರಿಶೀಲಿಸಿ ಅವರು ಚರಂಡಿ ನಿರ್ಮಾಣ ಮಾಡಲು ಆಕ್ಷೇಪಿಸಿದ್ದಲ್ಲಿ, ಅವರಿಗೆ ತಿಳುವಳಿಕೆ ನೋಟೀಸ್ ಜಾರಿ ಮಾಡಲು ಸಹಾಯಕ ಅಭಿಯಂತರರಿಗೆ ಸಭೆಯಲ್ಲಿ ತಿಳಿಸಿದರು.
- ಶ್ರೀಮತಿ ಪ್ರೇಮ, ಸದಸ್ಯರು ರವರು ಮಾತನಾಡುತ್ತಾ, 13ನೇ ಅಡ್ಡರಸ್ತೆ ನಂಜಪ್ಪ ಲೇಔಟ್‌ನಲ್ಲಿ ಮಂಜಣ್ಣ ಮನೆಯ ಎದುರು ಓಎಫ್‌ಸಿ ಕೇಬಲ್‌ಗಳು ಜೋತಾಡುತ್ತಿದ್ದು, ಇದರಿಂದಾಗಿ ತುಂಬಾ ತೊಂದರೆಯಾಗುತ್ತಿರುವುದಾಗಿ ಸಭೆಯಲ್ಲಿ ದೂರಿದರು.
- ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಸದರಿ ಸ್ಥಳವನ್ನು ಪರಿಶೀಲಿಸಿ ಸೂಕ್ತ ಕ್ರಮವಹಿಸುವಂತೆ ಸಹಾಯಕ ಅಭಿಯಂತರರಿಗೆ ಸಭೆಯಲ್ಲಿ ತಿಳಿಸಿದರು.

### 3) ಘನತ್ಯಾಜ್ಯ ನಿರ್ವಹಣೆ ವಿಭಾಗದ ಬಗ್ಗೆ:-

- ಶ್ರೀಹೇಮಂತ್‌ರವರು ಮಾತನಾಡುತ್ತ, ಚರ್ಚ್ ರಸ್ತೆಯಲ್ಲಿ ರಾತ್ರಿ 11.00 ಘಂಟೆಯ ನಂತರ ಸಾರ್ವಜನಿಕರು ಕಸವನ್ನು ಹಾಕುತ್ತಿದ್ದಾರೆಂದು ಸಭೆಯಲ್ಲಿ ದೂರಿದರು.
- ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಸದರಿ ಸ್ಥಳದಲ್ಲಿ ಕಸ ಹಾಕದಂತೆ ಸೂಚಿಸಿ ಎಚ್ಚರಿಕೆ ಬೋರ್ಡ್ ಅಳವಡಿಸಿ ಅದರ ಸುತ್ತ ಗಿಡಗಳನ್ನು ಹಾಕಬೇಕಾಗಿ ಸಭೆಯಲ್ಲಿ ತಿಳಿಸಿದರು.
- ಶ್ರೀ ರಾಜ್‌ಕುಮಾರ್ ಸದಸ್ಯರು ಮಾತನಾಡುತ್ತಾ, ವೆಂಕಟರಮಣ ಸ್ವಾಮಿ ದೇವಸ್ಥಾನದ ಹತ್ತಿರ ವೇಸ್ಟ್‌ಮೆಟಿರಿಯಲ್‌ಗಳನ್ನು ಎಸೆಯುತ್ತಿರುವುದಾಗಿ ಸಭೆಯಲ್ಲಿ ದೂರಿದರು.
- ಶ್ರೀ ಬಾಬು ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡುತ್ತಾ, ಕಸದ ಪಾಯಿಂಟ್‌ಗಳಲ್ಲಿ ಕಸ ಹಾಕದಂತೆ ಸೂಚಿಸಿ ಎಚ್ಚರಿಕೆ ಬೋರ್ಡ್ ಅಳವಡಿಸಲು ಕ್ರಮವಹಿಸಲಾಗುತ್ತಿದೆ ಎಂದು ಸಭೆಯಲ್ಲಿ ತಿಳಿಸಿದರು.

ಮು.ತಿ.ನೋ.

Scanned with CamScanner

- ➢ ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಬಿಬಿಎಂಪಿ ಮಾರ್ಷಲ್‌ಗಳು ಸಮಿತಿ ಸದಸ್ಯರು ಒಡಗೂಡಿ ಸ್ವಚ್ಛ ಸಿಟಿ ಫೌಂಡೇಷನ್ ಬಗ್ಗೆ ಅರಿವು ಮೂಡಿಸಿ ಆನ್‌ಲೈನ್ ಮೂಲಕ ಸಾರ್ವಜನಿಕರ ಅಭಿಪ್ರಾಯ ವ್ಯಕ್ತಪಡಿಸುವಂತೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವಂತೆ ಸಭೆಯಲ್ಲಿ ತಿಳಿಸಿದರು.

4) **ಕಂದಾಯ ವಿಭಾಗದ ಬಗ್ಗೆ:–**

- ➢ ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ವಾರ್ಡ್‌ನಲ್ಲಿ ಕಂದಾಯ ವಸೂಲಿ ಮಾಡಲು ತೆಗೆದುಕೊಂಡಿರುವ ಸೂಕ್ತ ಕ್ರಮಗಳ ಬಗ್ಗೆ ವರದಿಗಳನ್ನು ನೀಡುವಂತೆ ಸಭೆಯಲ್ಲಿ ಹಾಜರಿದ್ದ ತೆರಿಗೆ ಪರಿವೀಕ್ಷಕರಿಗೆ ಸೂಚಿಸಿದರು.
- ➢ ಸಭೆಯಲ್ಲಿ ಹಾಜರಿದ್ದ ಶ್ರೀ ಹರೀಶ್, ಟ್ಯಾಕ್ಸ್ ಇನ್ಸ್‌ಪೆಕ್ಟರ್ ವಾರ್ಡ್–102 ರವರು ಮಾತನಾಡುತ್ತಾ, ಈವರೆಗೂ ವಾರ್ಡ್‌ನಲ್ಲಿನ ಸಾರ್ವಜನಿಕರು ಸರಿಯಾದ ರೀತಿಯಲ್ಲಿ ತೆರಿಗೆಯನ್ನು ಪಾವತಿಸುತ್ತಿದ್ದು, ತೆರಿಗೆ ಪಾವತಿಸದ ಕೆಲವು ಕಟ್ಟಡಗಳ ಮಾಲೀಕರಿಗೆ ನೋಟೀಸ್ ಜಾರಿ ಮಾಡಲಾಗಿರುವುದಾಗಿ ಸಭೆಗೆ ತಿಳಿಸಿದರು.

5) **ಪಶುಪಾಲನೆ ವಿಭಾಗದ ಬಗ್ಗೆ:–**

- ➢ ಶ್ರೀಮತಿ ಪ್ರೇಮ, ಸದಸ್ಯರು ರವರು ಮಾತನಾಡುತ್ತಾ, ಸಣ್ಣಕ್ಕಿಬಯಲು ಹಾಗೂ ಸುತ್ತಲ ಪ್ರದೇಶಗಳಲ್ಲಿ ಬೀದಿ ನಾಯಿಗಳ ಕಾಟ ಹೆಚ್ಚಾಗಿರುವುದಾಗಿ ಸಭೆಯಲ್ಲಿ ದೂರಿದರು.
- ➢ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಸದರಿ ಸ್ಥಳಗಳಲ್ಲಿ ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ನಾಯಿಗಳ ಹಾವಳಿಯನ್ನು ತಡೆಗಟ್ಟಲು ಸೂಕ್ತ ಕ್ರಮವಹಿಸಿ ವಾಟ್ಸ್‌ಆಪ್ ಗ್ರೂಪ್‌ನಲ್ಲಿ ಈ ಬಗ್ಗೆ ವರದಿ ಮಾಡುವಂತೆ ಪಶುಪಾಲನಾ ಪರಿವೀಕ್ಷಕರಿಗೆ ತಿಳಿಸಲು ಸಭಾ ಕಾರ್ಯದರ್ಶಿಗಳಿಗೆ ಸೂಚಿಸಿದರು.

6) **ವಿದ್ಯುತ್ ವಿಭಾಗದ ಬಗ್ಗೆ:–**

- ➢ ಶ್ರೀ ಹೇಮಂತ್, ಸದಸ್ಯರು ರವರು ಮಾತನಾಡುತ್ತಾ, ಎನ್.ಜಿ.ಓ.ಸ್ ಕಾಲೋನಿಯಲ್ಲಿ ಎಲ್.ಇ.ಡಿ. ಬೀದಿ ದೀಪಗಳು ಹಾಳಾಗಿದ್ದು, ಅದನ್ನು ಸರಿಪಡಿಸಿಕೊಡುವಂತೆ ಸಭೆಯಲ್ಲಿ ತಿಳಿಸಿದರು.
- ➢ ಶ್ರೀ ದೇವರಾಜ್, ಸದಸ್ಯರು ರವರು ಮಾತನಾಡುತ್ತಾ, ಎನ್.ಜಿ.ಓ.ಸ್ ಕಾಲೋನಿಯಲ್ಲಿ ಅಳವಡಿಸಲಾಗಿರುವ ತೆರೆದ ವ್ಯಾಯಾಮ ಕೂಟದಲ್ಲಿ ರಾತ್ರಿ ವೇಳೆಯಲ್ಲಿ ವ್ಯಾಯಾಮ ಮಾಡುವವರಿಗೆ ತುಂಬಾ ತೊಂದರೆಯುಂಟಾಗಿದ್ದು, ವಿದ್ಯುತ್ ದೀಪಗಳನ್ನು ಅಳವಡಿಸಿಕೊಡುವಂತೆ ಸಭೆಯಲ್ಲಿ ತಿಳಿಸಿದರು.
- ➢ ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಮುಂದಿನ ಸಭೆಗಳಲ್ಲಿ ಬೀದಿ ದೀಪಗಳ ನಿರ್ವಹಣಾ ಗುತ್ತಿಗೆದಾರರಿಗೆ ತಪ್ಪದೇ ಹಾಜರಾಗುವಂತೆ ಹಾಗೂ ಸದರಿ ದೂರುಗಳಿಗೆ ಸಂಬಂಧಪಟ್ಟಂತೆ ಸ್ಥಳ ಪರಿಶೀಲಿಸಿ ಶೀಘ್ರವಾಗಿ ಸಮಸ್ಯೆ ಪರಿಹರಿಸುವಂತೆ ತಿಳಿಸುವಂತೆ ಸಭಾ ಕಾರ್ಯದರ್ಶಿಗಳಿಗೆ ತಿಳಿಸಿದರು.

7) **ಬಿ.ಡಬ್ಲ್ಯೂ.ಎಸ್.ಎಸ್.ಬಿ. ವಿಭಾಗದ ಬಗ್ಗೆ:–**

- ➢ ಶ್ರೀಮತಿ ಪ್ರೇಮ, ಸದಸ್ಯರು ರವರು ಮಾತನಾಡುತ್ತಾ, ಸಣ್ಣಕ್ಕಿಬಯಲು 3ನೇ ಅಡ್ಡರಸ್ತೆಯಲ್ಲಿ ವಾಟರ್ ಲೈನ್ ಹಾಳಾಗಿದ್ದು, ಕುಡಿಯುವ ನೀರು ಪೋಲಾಗಿ ರಸ್ತೆಯಲ್ಲಿ ಹರಿಯುತ್ತಿರುವುದಾಗಿ ಸಭೆಯಲ್ಲಿ ದೂರಿದರು.
- ➢ ಶ್ರೀ ದಿನೇಶ್ ಕಾಮಗಾರಿ ಪರಿವೀಕ್ಷಕರು ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರು ಮಾತನಾಡುತ್ತಾ, ಸದರಿ ಸ್ಥಳವನ್ನು ಪರಿಶೀಲಿಸಿ ಶೀಘ್ರವಾಗಿ ಕ್ರಮವಹಿಸುವುದಾಗಿ ಹೇಳಿದರು.

8) **ಬೆಸ್ಕಾಂ ವಿಭಾಗದ ಬಗ್ಗೆ:–**

- ➢ ಶ್ರೀ ರಾಜ್‌ಕುಮಾರ್, ಸದಸ್ಯರು ರವರು ಮಾತನಾಡುತ್ತಾ, ತೋಟದ ರಸ್ತೆಯಲ್ಲಿ ಬೆಸ್ಕಾಂ ರವರು ಕಾಮಗಾರಿ ನಡೆಸಿ ಡೆಬ್ರಿಸ್ ತೆರವುಗೊಳಿಸದೇ ಹಾಗೇ ಬಿಟ್ಟಿರುವುದಾಗಿ ಸಭೆಯಲ್ಲಿ ತಿಳಿಸಿದರು.

ಮು.ತಿ.ನೋ.

Scanned with CamScanner

- ಸಹಾಯಕ ಅಭಿಯಂತರರು ವಾರ್ಡ್-102 ರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಯು.ಜಿ. ಕೇಬಲ್ ಅಳವಡಿಸಲು ರಸ್ತೆಗಳನ್ನು ಅಗೆದಿದ್ದು, ಅವುಗಳನ್ನು ಸರಿಪಡಿಸದೇ ಹಾಗೇ ಬಿಟ್ಟಿರುವುದಾಗಿ ಸಭೆಯಲ್ಲಿ ದೂರಿದರು.
- ಶ್ರೀ ಸಿದ್ದರಾಜು ಸಹಾಯಕ ಅಭಿಯಂತರರು ಬೆಸ್ಕಾಂ ರವರು ಮಾತನಾಡುತ್ತಾ, ಮುಂದಿನ ದಿನಗಳಲ್ಲಿ ಸದರಿ ರಸ್ತೆಗಳಿಗೆ ರೆಸ್ಟೋರೇಷನ್ ಮಾಡುವ ಕಾಮಗಾರಿಯನ್ನು ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು.

ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳು ಸಭಾನಡವಳಿಗಳಿಗೆ ಅನುಸಾರವಾಗಿ ತಮ್ಮ ಇಲಾಖೆಗೆ ಸಂಬಂಧಿಸಿದ ದೂರುಗಳನ್ನು ಪಟ್ಟಿ ಮಾಡಿಕೊಂಡು ಸದರಿ ದೂರುಗಳನ್ನು ಸರಿಪಡಿಸಿರುವ ಬಗ್ಗೆ ಅಥವಾ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ದೃಢೀಕೃತ ಮಾಹಿತಿಗಳನ್ನು ತಪ್ಪದೇ **ವಾರ್ಡ್ ಕಮಿಟಿ ವಾರ್ಡ್-102 ವಾಟ್ಸ್ ಆಪ್ ಗ್ರೂಪ್** ನಲ್ಲಿ ಮತ್ತು ಪ್ರತಿ ವಾರ್ಡ್ ಸಮಿತಿ ಸಭೆಯಲ್ಲಿ ವರದಿ ಮಾಡಲು ನೋಡಲ್ ಅಧಿಕಾರಿಯವರು ಸೂಚಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು. ಸಭೆಯ ಕೊನೆಯಲ್ಲಿ ಸಮಿತಿ ಕಾರ್ಯದರ್ಶಿ ರವರು ಸಮಿತಿ ಸಭೆಗೆ ಆಗಮಿಸಿರುವ ಎಲ್ಲರಿಗೂ ವಂದಿಸಿದರು.

**ಕಾರ್ಯದರ್ಶಿ**
ಹಾಗೂ ಸಹಾಯಕ ಅಭಿಯಂತರರು,
ವಾರ್ಡ್ ಸಂಖ್ಯೆ-102

**ನೋಡಲ್ ಅಧಿಕಾರಿಗಳು**
ವಾರ್ಡ್ ಸಮಿತಿ, ವಾರ್ಡ್-102

<u>ಪ್ರತಿಯನ್ನು</u> :-

1) ಮಾನ್ಯ ವಲಯ ವಿಶೇಷ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
2) ಮಾನ್ಯ ಜಂಟಿ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
3) ಮಾನ್ಯ ಮುಖ್ಯ ಅಭಿಯಂತರರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ತಾಂತ್ರಿಕ ಸಹಾಯಕರಿಗೆ ಸಲ್ಲಿಸಿದೆ.
4) ಮಾನ್ಯ ಆರೋಗ್ಯ ಅಧಿಕಾರಿಗಳು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
5) ಮಾನ್ಯ ಅಧೀಕ್ಷಕ ಅಭಿಯಂತರರು, (ಘನತ್ಯಾಜ್ಯ ನಿರ್ವಹಣೆ) ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
6) ಮಾನ್ಯ ಅರಣ್ಯಾಧಿಕಾರಿಗಳು, ಅರಣ್ಯ ವಿಭಾಗ ರವರಿಗೆ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
7) ಮಾನ್ಯ ಅಧೀಕ್ಷಕರು, ತೋಟಗಾರಿಕೆ ಇಲಾಖೆ ರವರ ಅವಗಾಹನೆಗೆ ತರಲು ಹಾಗೂ ಅಗತ್ಯ ಕ್ರಮಕ್ಕಾಗಿ ಸಹಾಯಕರಿಗೆ ಸಲ್ಲಿಸಿದೆ.
8) ವೈದ್ಯಕೀಯ ಆರೋಗ್ಯ ಅಧಿಕಾರಿಗಳು, (ಪಶ್ಚಿಮ ವಲಯ) ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
9) ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
10) ಕಂದಾಯ ಅಧಿಕಾರಿಗಳು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
11) ಸಹಾಯಕ ಕಾರ್ಯಪಾಲಕ ಅಭಿಯಂತರರು ನಾಗಪುರ ಉಪವಿಭಾಗ ರವರಿಗೆ ಸೂಕ್ತ ಕ್ರಮವಹಿಸಲು ಸಲ್ಲಿಸಿದೆ.
12) ಸಹಾಯಕ ಕಂದಾಯ ಅಧಿಕಾರಿಗಳು ನಾಗಪುರ ಉಪವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
13) ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ ವಿಭಾಗ) ನಾಗಪುರ ಉಪವಿಭಾಗ ರವರ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
14) ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ವಿಭಾಗ ರವರಿಗೆ ಸೂಕ್ತ ಕ್ರಮ ವಹಿಸಲು ಸಲ್ಲಿಸಿದೆ.
15) ಎಲ್ಲಾ ಸಂಬಂಧಪಟ್ಟವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
16) ಕಛೇರಿಯ ಕಡತಕ್ಕೆ.

Scanned with CamScanner

ವಾರ್ಡ್ ಸಂಖ್ಯೆ - 102 ವೃಷಭಾವತಿನಗರ

## ವೃಕ್ಷ ಮಿತ್ರರ ಹಾಜರಾತಿ ಪಟ್ಟಿ

ದಿನಾಂಕ: 06/02/2021 ರಂದು ಬೆಳಗ್ಗೆ 10. ಘಂಟೆಗೆ. ವಾರ್ಡ್ ಸಮಿತಿ ಸಭೆಯನ್ನು ಹಮ್ಮಿಕೊಳ್ಳಲಾಗಿದ್ದು ಸಭೆಯಲ್ಲಿ ಭಾಗವಹಿಸಿದ ಅಧಿಕಾರಿಗಳು ಹಾಗೂ RWA ಸದಸ್ಯರ ಹಾಜರಾತಿಯನ್ನು ತೆಗೆದುಕೊಳ್ಳಲಾಗಿರುತ್ತದೆ.

| ಕ್ರಮ ಸಂಖ್ಯೆ | ಹೆಸರು | ಪದನಾಮ ಇಲಾಖೆ. | ಮೊಬೈಲ್ ಸಂಖ್ಯೆ | ಸಹಿ |
|---|---|---|---|---|
| 1) | ವಿಜಯಶೇಖರ್. k | ಸ್ಟೇಷನ್ ಅಧಿಕಾರಿ | 9448670084 | [signature] 6/2/21 |
| 2) | ಶ್ರೀಧರ್. ಜಿ. | [illegible] AE-W-102 | 9845236847 | [signature] |
| 3) | ಗೋವಿಂದರಾಜು | SHI | 9845512187 | G. R. Govindraj |
| 4) | ಬಿ. ಶ್ರೀಮಂಜುನಾಥ್ | T.I | 9743557879 | |
| 5) | ಸಿದ್ದರಾಜು. | AE (Elec Bescom) | 9449870177 | [signature] |
| 6) | ರಕ್ಷಿತ್. R | Marshal | 9380888848 | Raksh |
| 7) | ಬಾಬು | JHI-102 | 9632549664 | S. Babu |
| 8) | ಮಂಜು ದೇವಪ್ಪ | [illegible] | | |
| 9) | ಪ್ರೇಮಾ | RWA | 9632728915 | Prema |
| 10) | ಗೌರಮ್ಮ | —॥— | 9740249333 | K Gowri |
| 11) | ಕೆ. ಹೆಚ್. ಮಹೇಶ್ | BWSSB | 9945421088 | [signature] |
| 12 | ~~ಆ.ಜೆ. ಮಂಜುನಾಥ್~~ | ~~Member~~ | ~~8553779344~~ | RJ |
| 13 | Hemanth Kumar | ಸದಸ್ಯರು | 9741992319 | [signature] |

Scanned with CamScanner

| | | | | |
|---|---|---|---|---|
| 14 | ಚೆನ್ನರಾಜು | RWA | 9632584986 | [illegible] |

Scanned with CamScanner